
# ಉದ್ಯೋಗ ಪರ್ವ

## ಶ್ರೀ ನಾಗೇಶ ಬಾಬುರಾವ್ ಶೆಟ್ಟಿ ಅವರ

## ಅಭಿನಂದನ ಗ್ರಂಥ




ಸಂಪಾದಕರು

- ಡಾ. ಎಸ್. ಟಿ. ಮೇರವಾಡೆ
- ಡಾ. ಆರ್. ವಿ. ಪಾಟೀಲ

**UDYOGA PARVA :** Shri Nagesh Shetty Abhinandangranth, Edited by : Dr. S. T. Merwade Dept of Hindi S. B. Arts and K.C.P. Science College, Vijayapur – Dr. R. V. Patil Dept of Kannada, Anjuman Degree College, Vijayapur

ISBN : 978-93-83813-20-9

| | | |
|---|---|---|
| Publisher | : | Soumya Prakashan<br>Vijayapur - 586 103 |


© Publisher

| | | |
|---|---|---|
| First Edition | : | 2016 |
| Copies | : | 1000 |
| Pages | : | xxxii + 590 = 622 |
| Book Size | : | Demy 1/8 |
| Paper Used | : | 80 G.S.M. Maplitho |

**ಉದ್ಯೋಗ ಪರ್ವ : ಶ್ರೀ ನಾಗೇಶ ಬಾಬುರಾವ್ ಶೆಟ್ಟಿ ಅವರ ಅಭಿನಂದನ ಗ್ರಂಥ**

| | | |
|---|---|---|
| ಸಂಪಾದಕರು | : | ಡಾ. ಎಸ್. ಟಿ. ಮೇರವಾಡೆ<br>ಡಾ. ಆರ್. ವಿ. ಪಾಟೀಲ |
| ಪ್ರಕಾಶಕರು | : | ಸೌಮ್ಯ ಪ್ರಕಾಶನ<br>ವಿಜಯಪುರ – ೫೮೬ ೧೦೩ |


© ಪ್ರಕಾಶಕರವು

| | | |
|---|---|---|
| ಮೊದಲ ಮುದ್ರಣ | : | ೨೦೧೬ |
| ಪ್ರತಿಗಳು | : | ೧೦೦೦ |
| ಪುಟಗಳು | : | xxxii + ೫೯೦ = ೬೨೨ |
| ಪುಸ್ತಕದ ಆಕಾರ | : | ಡೆಮಿ ೧/೮ |
| ಬಳಸಿದ ಕಾಗದ | : | ೮೦ ಜಿ.ಎಸ್.ಎಂ. ಮ್ಯಾಪಲಿಥೋ |

ಮುದ್ರಕರು :

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಗದಗ – 582 101. M. 9448223602
Email : chaitanyaoffset@gmail.com

## ಭಾಗ-೨ ಸ್ನೇಹ ಪರ್ವ


೧. ಎಂ. ಆರ್. ರೂವಾರಿ ಕೆ. ಬಾಬುರಾವ್ ಶೆಟ್ಟಿ ಚಿರಸ್ಮರಣೆ ೫೧
• ಈಶ್ವರಚಂದ್ರ ಚಿಂತಾಮಣಿ

೨. ಗುಪ್ತದಾನಿ ಶ್ರೀ ಬಾಬುರಾವ್ ಶೆಟ್ಟಿ ೫೮
• ಈಶ್ವರ ಬಸಪ್ಪ ನಾವಲಗಿ

೩. ಬಾಬುರಾವ್ ಮಾಲಕರು ೬೨
• ನಾಗಪ್ಪ ಸಿ. ಚಿಂಚಲಿ

೪. ಪ್ರಾಮಾಣಿಕ ವ್ಯಾಪಾರಿ ಶ್ರೀ ಬಾಬುರಾವ್ ಶೆಟ್ಟಿ ೬೪
• ಮಲಕಪ್ಪಣ್ಣ ಗಾಣಿಗೇರ

೫. ಪರೋಪಕಾರಿ ಶ್ರೀ ಬಾಬುರಾವ್ ಶೆಟ್ಟಿ ೬೬
• ಪ್ರೊ. ರಾಜು ಆಲಗೂರ

೬. ಅಪರೂಪದ ವ್ಯಕ್ತಿ ೬೮
• ಕವತಾರ ಚಂದ್ರಶೇಖರ ಅಜಿಲಾ

೭. ನನ್ನ ಮಾರ್ಗದರ್ಶಕರು ೬೯
• ಸದಾಶಿವ ವಿಠ್ಠಲ ಶೆಟ್ಟಿ

೮. ಮಾನವೀಯ ಮೌಲ್ಯವನ್ನು ಎತ್ತಿಹಿಡಿದ ಮಹಾನುಭಾವರು ೭೨
• ಬಾಲಚಂದ್ರ ಎಚ್. ಕೋರವಾರ

೯. ಸ್ನೇಹಮಯಿ ಶೆಟ್ಟಿ ಮನೆತನ ೭೪
• ಮಾಧವ ಕೋಟ್ಯಾನ

೧೦. ಸೌಜನ್ಯದ ಭಂಡಾರ ೭೬
• ಕೃಷ್ಣಾಜಿ ದಾ. ಕುಲಕರ್ಣಿ

೧೧. ನಾಗೇಶ ಮಾಲಕರು ೭೯
• ಡಾ. ಎಸ್. ಟಿ. ಮೇರವಾಡೆ

೧೨. ಆಕರ್ಷಕ ವ್ಯಕ್ತಿತ್ವದ ಶ್ರೀ ನಾಗೇಶ ಮಾಲಕರು ೮೫
• ಪ್ರೊ. ಬಿ. ಬಿ. ಡೆಂಗನವರ

೧೩. ಎಲ್ಲರೊಳಗೊಂದಾಗುವ ಹೃದಯವಂತರು
ಶ್ರೀ ನಾಗೇಶ ಶೆಟ್ಟಿಯವರು ೯೨
• ಡಾ. ಆರ್. ವಿ. ಪಾಟೀಲ

೧೪. ಸಹಾಯ ಹಸ್ತದ ಸ್ನೇಹಿತರು ೯೭
• ಸುರೇಶ ಎಂ. ಇಟಗಿ

# ನಾಗೇಶ ಮಾಲಕರು

• ಡಾ. ಎಸ್. ಟಿ. ಮೇರವಾಡೆ

ದಿನಾಂಕ ೧೫.೦೭.೧೯೮೫ ರಂದು ಮೊಟ್ಟ ಮೊದಲು ನಾನು ವಿಜಯಪುರಕ್ಕೆ ಬಂದೆ. ಹಿಂದಿನ ದಿನ ಅಂದರೆ ದಿನಾಂಕ ೧೪.೦೭.೧೯೮೫ರಂದು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಹಿಂದಿ ವಿಭಾಗದಿಂದ ಎಮ್.ಎ. ಅಂಕಪಟ್ಟಿ ಪಡೆದು ರಾತ್ರಿ ಮನೆ ತಲಪುವುದರಲ್ಲಿ ವಿಜಾಪುರದ ಬಿ.ಎಲ್.ಡಿ.ಇ ಸಂಸ್ಥೆಯಲ್ಲಿ ಹಿಂದಿ ಉಪನ್ಯಾಸಕ ಹುದ್ದೆ ಖಾಲಿ ಇದೆ ಎಂದು ತಿಳಿಯಿತು. ಮರುದಿನ ಮುಂಜಾನೆ ಮನೆಯಲ್ಲಿ ಚಿಕ್ಕಪ್ಪನವರಾದ ಶ್ರೀ ಜಿ.ಡಿ.ಮೇರವಾಡೆ ಇವರ ಗಲ್ಲೆಪೆಟ್ಟಿಗೆಯಿಂದ ೫೦ ರೂಪಾಯಿ ತಗೆದುಕೊಂಡು ಗದಗ ರೈಲು ನಿಲ್ದಾಣದಿಂದ ಮಧ್ಯಾಹ್ನ ೩ ಗಂಟೆಗೆ ವಿಜಾಪುರ ರೈಲು ನಿಲ್ದಾಣಕ್ಕೆ ಬಂದು ತಲುಪಿದೆ ಹೊರಗಡೆ "ಗಾಂಧಿ ಚೌಕ, ಗಾಂಧಿ ಚೌಕ ವ್ಹಾಯಾ ಡೈರೆಕ್ಟ ಅಂತ ಅಟೋ, ಟಾಂಗಾದವರು ಕೂಗುತಿದ್ದರು. ಪಕ್ಕದಲ್ಲಿ ನಿಂತ ವಿದ್ಯಾರ್ಥಿಗೆ ನಾನು ಕೇಳಿದೆ ನಾನು ವಿಜಯ ಕಾಲೇಜಿಗೆ ಹೋಗಬೇಕಾಗಿದೆ ಆಗ ಆ ವಿದ್ಯಾರ್ಥಿ 'ಸರ್ ಇಲ್ಲಿಂದ ಗಾಂಧಿ ಚೌಕ ಅಥವಾ ಮೀನಾಕ್ಷಿ ಚೌಕ ಹೋಗ್ರಿ, ಅಲ್ಲಿಂದ ಕಾಲೇಜ ಬಸ್ ಸಿಗುತ್ತದೆ ಎಂದು ಹೇಳಿದನು. ನಾನು ಟಾಂಗಾದಲ್ಲಿ ಒಂದು ರೂಪಾಯಿ ಕೊಟ್ಟು ಗಾಂಧಿ ಚೌಕಿಗೆ ಬಂದೆ. ಟಾಂಗಾದಲ್ಲಿ ನಾನೊಬ್ಬನೆ ಇದ್ದೆ. ನನಗೆ ಪ್ರತಿಯೊಬ್ಬರೊಂದಿಗೆ ಮಾತನಾಡುವ ಅಭ್ಯಾಸ. ದಾರಿಯಲ್ಲಿ ಟಾಂಗಾದವನಿಗೆ ನಿನ್ನ ಹೆಸರೆನೆಪ್ಪ ಅಂತಾ ಕೇಳಿದೆ. ಆಗ ಆತ 'ಮೇರಾ ನಾಮ ರಜಾಕ' ಅಂತ ಹೇಳಿ ಬೀಡಿ ಸೇದ ತೊಡಗಿದ. ರಸ್ತೆಯ ಬದಿಗೆ ಆಕಡೆ ಈಕಡೆ ನೋಡುವದನ್ನು ಗಮನಿಸಿ ರಜಾಕ ಕೇಳಿದ 'ಕ್ಯಾ ತುಮ್ ಪಹಲೀ ಬಾರ ವಿಜಾಪುರ ಆಯೇ ಹೈ?. ಎಂದು ಕೇಳಿದ. ಹೌದು ಅಂದೆ. ಕ್ಯಾ ತುಮ್ ಹಿಂದಿ ನಹೀ ಜಾನತೆ ಎಂದು ಮರು ಪ್ರಶ್ನಿಸಿದ. ಅರೇ ರಜಾಕಸಾಹೇಬ ಮೈತೋ ಹಿಂದಿ ಪಢಾನೆಕೇಲಿಯೇ ಹೀ ವಿಜಾಪುರ ಆಯಾಹುಂ ಅಂದೆ. ಅಚ್ಛಾ ಅಚ್ಛಾ ಕಹಾ ಪಡತೆ ಹೋ ಅಂತಾ ಕೇಳಿದ. ನಹೀ ನಹೀ ಯಹೀ ಸಾಲ ಮೇರಿ ಪಡಾಯಿ ಪೂರೀ ಹೂಯಿ ಹೈ, ನೌಕರಿಕೆಲಿಯೇ ಆಯಾಹುಂ. ರಜಾಕ ಬೀಡಿಯ ಇನ್ನೊಂದು ಝುರಿ ಎಳೆದು 'ವಸೂಲಿ ಯಾ

ಪೈಸಾ ಹೈ ತೋ ನೌಕರಿ, ನಹೀ ತೋ ನಹೀ' ಅಂತಾ ಹೇಳಿದ ಅಷ್ಟರಲ್ಲಿ ಗಾಂಧಿ ಚೌಕ ಬಂತು ಉತರೋ ಸಾಬ ಯಹೀ ಗಾಂಧಿ ಚೌಕ ಅಂತಾ ನನಗೆ ಟಾಂಗಾದಿಂದ ಇಳಿಸಿದ. ನಾನು ರಜಾಕನಿಗೆ ಒಂದು ರೂಪಾಯಿ ಕೊಟ್ಟೆ. ಸಲಾಂ ಸಾಬ ಫೀರ ಮಿಲೆಂಗೆ ಅಂತಾ ಟಾಂಗಾ ನಡೆಸಿದ. ಗಾಂಧಿ ಚೌಕ ಪೋಲಿಸ ಠಾಣೆ ಮುಂದೆ ನಿಂತು ಸುತ್ತೆಲ್ಲ ನೋಡಿದೆ. ಬಹಳ ಹಳೆ ಊರಿನಂತೆ ಕಾಣಿಸುತ್ತಿತ್ತು ತುಂಬಾ ಧೂಳ. ಎಲ್ಲರ ಬಾಯಿಯಲ್ಲಿ ದಖಣಿ ಹಿಂದಿ ಭಾಷೆ, ಮುಂದೆ ನಾಲ್ಕಾರು ಹೆಜ್ಜೆ ಬರುವದರಲ್ಲಿಯೇ ಮೈಸೂರ ರೆಸ್ಟೋರೆಂಟ ಅಂತಾ ಮೂರನೆ ಮಹಡಿಯ ಮೇಲಿನ ಬೋರ್ಡ ಕಂಡಿತು. ಹೊಟ್ಟೆ ಹಸಿದಿತ್ತು. ನೋಡೋಣ ಅಂತ ಒಳಗಡೆ ಬಂದೆ ಕೆಳಗೆ ೨೦-೨೫ ಸೈಕಲ್ ಹಾಗೂ ಒಂದು ಸ್ಕೂಟರ ನಿಂತಿತ್ತು. ಜನ ಮೇಲೆರುತಿದ್ದರು ಅದನ್ನ ನೋಡಿ ಹೋಟೆಲ ಮೇಲಿರ ಬಹುದೆಂದು ಮೆಟ್ಟಿಲು ಏರಿ ಮೇಲೆ ಹೋದೆ. ಸಮಯ ಮಧ್ಯಾಹ್ನ ನಾಲ್ಕು ಗಂಟೆ. ಕೌಂಟರನಲ್ಲಿ ಬಡಕಲು ಮನುಷ್ಯ ಕುಳಿತಿದ್ದ. ಆತನಿಗೆ ಊಟ ಸಿಗುತ್ತಾ, ಅಂತ ಕೇಳಿದೆ 'ಪುರಿ ಊಟ ಇದೆ' ಎಂದು ಹೇಳಿದ. ಊಟ ಮಾಡುವ ಇಚ್ಛೆ ಇತ್ತು ನನ್ನ ಹತ್ತಿರ ಕೇವಲ ೩೭ ರೂಪಾಯಿ ಉಳಿದಿದ್ದವು. ಅಂದರೆ ಗದಗ ವಿಜಾಪುರಗೆ ರೈಲು ಚಾರ್ಜ ೧೨ ರೂಪಾಯಿ, ಒಂದು ರೂಪಾಯಿ ಟಾಂಗಾದವನಿಗೆ ಹೀಗೆ ೫೦ ರೂಪಾಯಿದಲ್ಲಿ ೧೩ ರೂಪಾಯಿ ಖರ್ಚಾಗಿತ್ತು. ಒಳಗಡೆ ಹೋಗಿ ಪ್ಲೇಟ ಇಡ್ಲಿ ತಿಂದು ಚಹಾ ಕುಡಿದು, ಹೊರಗಡೆ ಬಂದು ಇಲ್ಲಿಂದ ಕಾಲೇಜಿಗೆ ಹೋಗಲು ಬಸ್ ಎಲ್ಲಿ ಸಿಗಬಹುದೆಂದು ವಿಚಾರಿಸುತ್ತಾ ಇನಾಮದಾರ ಚಸ್ಮಾ ಅಂಗಡಿಯ ಮುಂದಿನಿಂದ ಟಾಂಗಾ ಸ್ಟ್ಯಾಂಡ ಬರುವುದರಲ್ಲಿಯೇ ಒಂದು ಬಸ್ ನಿಂತಿತು. ವಿಜಯ ಕಾಲೇಜ ಅಂತ ಬೋರ್ಡ ಇತ್ತು. ಬಸ್ ಹತ್ತಿ ಕಾಲೇಜಿನ ಸ್ಟಾಪಿಗೆ ಬಂದೆನು. ಅಲ್ಲಿಂದ ಕಾಲೇಜನ ಆಫೀಸಿನ ಕಡೆಗೆ ನಡದೆ ಅಲ್ಲಿ ಶ್ರೀ ಪಿ. ಟಿ. ದಢೇಕರ ಅವರನ್ನ ಭೆಟ್ಟಿಯಾದೆ. ಅವರು ಪ್ರಿನ್ಸಿಪಾಲ ಬನ್ನೂರ ಅವರಿಗೆ ಭೆಟ್ಟಿ ಮಾಡಿಸಿದರು. ಪ್ರಿನ್ಸಿಪಾಲ ಬನ್ನೂರ ಅವರು ಟೆಂಪರರವರಿ ಆದೇಶ ಕೊಡಿಸಿದರು. ದಿನಾಂಕ ೧೬-೦೭-೧೯೮೫ ರಂದು ನನ್ನ ಉಪನ್ಯಾಸ ವೃತ್ತಿ ಆರಂಭವಾಯಿತು.

ಮರುದಿನ ಸುಮಾರು ೧೨.೩೦ಕ್ಕೆ ಎರಡನೆಯ ಸಲ ಮೈಸೂರ ರಸ್ಟೋರೆಂಟಿಗೆ ಬಂದೆ. ಕೌಂಟರನಲ್ಲಿ ಅದೇ ಬಿಳಿ ಶರಟಿನ ಬಡಕಲು ಮನುಷ್ಯ ಕುಳಿತಿದ್ದನು. ಟಿಫನ್ ಮಾಡಿ ಕೌಂಟರನಲ್ಲಿ ಬಿಲ್ಲ ಕೊಡುತ್ತಾ ಕೇಳಿದೆ ನೀವೇ ಮಾಲಿಕರಾ? ಇಲ್ಲಾರೀ ನಾನು ಇಲ್ಲಿ ಕೆಲ್ಸ ಮಾಡುತ್ತಿನಿ ಅಂತಾ ಹೇಳಿದ, ಸ್ವಲ್ಪ ಹೊತ್ತು ಅಲ್ಲೇ ನಿಂತುಕೊಂಡೆ. ಯಾವ ಊರು ಅಂತ ಅವರು ಕೇಳಿದರು. ನಾನು ಗದಗ ಅಂದೆ. ನಮ್ಮ ಲಾಜಿಂಗನಲ್ಲಿ ಗದುಗಿನ ಜನ ಬರುತ್ತಾರೆ ಅಂತಾ ಹೇಳಿದ ತಕ್ಷಣ ಮಂತ್ಲಿ ರೂಮ ಸಿಗುತ್ತಾ ಅಂತಾ ಕೇಳಿದೆ. ಇಲ್ಲಾ ಇಲ್ಲಾ ನಮ್ಮಲ್ಲಿ ೮ ರೂಮ ಮಾತ್ರ, ಮಂತ್ಲಿ ಸಿಸ್ಟಂ ಇಲ್ಲಾ ಅಂತಾ ಖಡಾ ಖಂಡಿತವಾಗಿ ಹೇಳಿದ, ನೀವು ಉಡುಪಿ ಊರಿನವರೇ, ಅಂತಾ ಕೇಳಿದೆ ಹೌದು ಬಹಳ ದಿನಗಳಿಂದ ಇಲ್ಲಿ

ಇದ್ದೇನೆ ಎಂದು ಹೇಳಿದರು. ನಿಮ್ಮ ಹೆಸರೇನು ಅಂತಾ ಕೇಳಿದೆ ಬಹಳ ವಿನಯವಾಗಿ ಕುಟ್ಟಿ ಶೆಟ್ಟಿ ಅಂತಾ ಹೇಳಿದ್ರು. ಹಾಗೇ ಪ್ರತಿದಿನ ಅವರೊಂದಿಗೆ ಮಾತಾನಾಡೋದು ಮುಂದುವರೆಯಿತು. ನಾನು ಮುಂಜಾನೆ ೭.೩೦ ಕ್ಕೆ ಕಾಲೇಜಿಗೆ ಹೋಗುವಾಗ ಮೈಸೂರ ರೆಸ್ಟೋರೆಂಟಿನಲ್ಲಿ ಟಿಫನ್ ಮಾಡಿಯೇ ಬರುತ್ತಿದ್ದೆ. ಹೀಗೆ ೨-೩ ವರ್ಷ ಕಳೆದ ನಂತರ ಕುಟ್ಟಿ ಶೆಟ್ಟಿ ಈ ಹೋಟೆಲ ಮ್ಯಾನೇಜರ ಅಂತಾ ತಿಳಿಯಿತು. ಹೋಟೆಲಿಗೆ ಪ್ರತಿದಿನ ಹೋಗುತ್ತಿದ್ದೆ, ಶೇಖರ, ಮೋಹನ, ಅರ್ಜುನ ಇವರೆಲ್ಲರೂ ಮಾತನಾಡುತ್ತಿದ್ದರು. ಮುಂದಿನ ದಿನಗಳಲ್ಲಿ ಶೇಖರ, ಮೋಹನ, ಅರ್ಜುನ ಇವರು ಮ್ಯಾನೇಜರ ಅಂತಾ ತಿಳಿಯಿತು. ಒಂದು ದಿನಾ ಮುಂಜಾನೆ ಚಹಾ ಕುಡಿದು ಬಿಲ್ಲ ಕೊಡಲು ಹೋದೆ ಬಿಲ್ಲಿನಲ್ಲಿ ೬೦ ಪೈಸೆ ಅಂತಾ ಬರೆದಿತ್ತು. ಆಗ ಕುಟ್ಯಾಮಾ ಅವರಿಗೆ ಕೇಳಿದೆ (ಕುಟ್ಟಿ ಶೆಟ್ಟಿಯವರಿಗೆ ಎಲ್ಲರೂ ಕುಟ್ಯಾಮಾ ಅಂತಾ ಕರೆಯುತ್ತಾರೆ) ಇಲ್ಲಾ ಸರ್ ಇಂದಿನಿಂದ ಚಹಾ ೬೦ ಪೈಸಾ; ರೇಟ ಹೆಚ್ಚಾಗಿದೆ ಅಂತಾ ಹೇಳಿದರು. ಆಗ ನಾನು ಒಮ್ಮೆ ೧೦ ಪೈಸಾ ಚಹಾಕ್ಕೆ ಹೆಚ್ಚು ಮಾಡಿದ್ದು ತಪ್ಪು ಅಂತಾ ಅವರೊಂದಿಗೆ ವಾದಿಸಿದೆ. ಏನು ಮಾಡೊದು ಸರ್ ಸಕ್ಕರಿ ಚಹಾಪುಡಿ ರೇಟ ಹೆಚ್ಚಾಗಿದೆ ಅದಕ್ಕೆ ಚಹಾದ ರೇಟ ಹೆಚ್ಚು ಮಾಡಿದ್ದೇವೆ. ಅಂತಾ ಕುಟ್ಯಾಮ ವಿನಯವಾಗಿ ಹೇಳಿ ಸುಮ್ಮನಾದರು. ನಾಲ್ಕು ಐದು ವರ್ಷ ಕಳೆದರು ಮಾಲಿಕರ ಪರಿಚಯ ನನಗಾಗಲಿಲ್ಲ ಪ್ರತಿ ದಿನ ಮುಂಜಾನೆ ಹೋಟೆಲಿಗೆ ಹೋದಾಗ ಶೇಖರ, ಮೋಹನ ಇವರೊಂದಿಗೆ ಹರಟೆಯಾಡಿ ಬಿಲ್ ಕೊಡುವಾಗ ಕುಟ್ಯಾಮ ಇವರಿಗೆ ಮಾತನಾಡಿಯೇ ಕಾಲೇಜಿಗೆ ಹೋಗುತಿದ್ದೆ. ನನ್ನ ನೌಕರಿಯಲ್ಲಿ ಬಹಳಷ್ಟು ತೊಂದರೆಗಳಾದವು ವಿಜಾಪುರ ಬಿಟ್ಟು ಬಾಗಲಕೋಟೆಗೆ ಒಂದು ವರ್ಷ ಅಲ್ಲಿಂದ ಸಿಂದಗಿಯಲ್ಲಿ ಎರಡು ವರ್ಷ ಖಾಯಂ ನೌಕರಿಗಾಗಿ ಬಹಳ ಅಲೆದಾಡಿದೆ. ವಿಜಾಪುರಕ್ಕೆ ಮೊಟ್ಟು ಮೊದಲು ಬರುವ ದಿನ ಟಾಂಗಾದಲ್ಲಿ ರಜಾಕ ಹೇಳಿದ್ದು 'ವಸೂಲಿ ನಹೀ ತೋ ನೌಕರಿ ನಹೀ' ಅವನ ಅನುಭವದ ಮಾತು ನೆನಪಾಗುತ್ತಿತ್ತು. ಏನೋ ಹೇಗೋ ಶತ ಪ್ರಯತ್ನ ಮಾಡಿ ೧೯೯೦ರಲ್ಲಿ ನೌಕರಿ ಪಡೆದುಕೊಂಡೆ. ನೌಕರಿ ಸಿಕ್ಕ ದಿನ ನನಗೆ ಆಕಾಶ ಭೂಮಿ ಒಂದಾದಂತೆ ಕಾಣುತ್ತಿತ್ತು. ನಾನು ಗದಗಿನವನು, ಮುನ್ಸಿಪಾಲಿಟಿಯ ಸಿಪಾಯಿಯ ಮಗ, ಬಡವ, ಜಾತಿಯಿಂದ ಅಲ್ಪಸಂಖ್ಯಾತ, ವಸೂಲಿ ಶಬ್ದದ ಅರ್ಥವೇ ನನಗೆ ತಿಳಿದಿರಲಿಲ್ಲ. ಯಾವ ತಪಸಿನ ಫಲಮೋ ನನಗೆ ತಿಳಿದಿಲ್ಲ. ಒಟ್ಟಿನಲ್ಲಿ ೧೯೯೦ ರಲ್ಲಿ ಖಾಯಂ ನೌಕರಿ ಸಿಕ್ಕಿತು. ವಿಚಿತ್ರವಾದರೂ ಸತ್ಯ ಅನ್ನಬಹುದು.

ನಾನು ೧೯೯೭-೯೮ ರಲ್ಲಿ ದರ್ಗಾ ಜೇಲು ಎದರು ಮನೆ ಕಟ್ಟಲು ಆರಂಭಿಸಿದೆ. ಪ್ರೊ.ಎಸ್.ಬಿ.ಮಾಡಗಿ ನನಗೆ ಆತ್ಮೀಯರು. ಅವರೇ ಒಬ್ಬ ಮೇಸ್ತ್ರಿಯನ್ನು ಪರಿಚಯಸಿದರು. ಆತನ ಹೆಸರು ರಫಿಕ್. ಅವನೇ ನಮ್ಮ ಮನೆಯ ಕಟ್ಟಡದ ಮೇಸ್ತ್ರಿ. ನನ್ನದು ಗೆಳೆತನದ ಸ್ವಭಾವ. ಅವನೊಂದಿಗೆ ಸ್ನೇಹ ಬೆಳೆಯಿತು. ಆತ ಅಶಿಕ್ಷಿತನಾಗಿದ್ದರೂ, ಸಂತ ಸ್ವಭಾವದವನು ಯಾರಿಗೂ ಮೋಸ ವಂಚನೆ ಮಾಡುವವನಲ್ಲ. ಅವನ ಹಿರೋ ಹೋಂಡಾ ಗಾಡಿಯ ಮೇಲೆ ನಾನು ಬಹಳ

ಸುತ್ತಾಡಿದ್ದೇನೆ. ಸ್ವಲ್ಪ ದಿನ ಕಾಲೇಜಿಗೆ ಕಳುಹಿಸಲು ಕರೆಯಲು ಸಹ ರಫೀಕ ಬರುತ್ತಿದ್ದನು. ರಫೀಕ ಪ್ರತಿದಿನಾ ಮುಂಜಾನೆ ವಿಜಾಪುರ ಗೌರ್ನಮೆಂಟ ಸ್ಕೂಲಿನ ಗ್ರೌಂಡಿನಲ್ಲಿ ಕ್ರಿಕೆಟ ಆಟ ಆಡುತ್ತಿದ್ದರು. ಅಲ್ಲಿ ಅಶೋಕ ಜೈನ, ಸುರೇಶ ಇಟಗಿ, ನಾಗೇಶ ಶೆಟ್ಟಿ, ಸುರೇಶ ತೊರವಿ, ಕೋಟೆನವರ (ಚಹಾಪುಡಿ ಸಾಹೇಬರು) ಹೀಗೆ ಹತ್ತು ಹಲವಾರು ಕ್ರಿಕೆಟ ಆಟದ ಸ್ನೇಹಿತರು. ಒಂದು ದಿನ ಕಟ್ಟಡದ ಮನೆಯ ಗೋಡೆಗಳಿಗೆ ನೀರು ಹಾಕುತ್ತಿರುವಾಗ ಮೇಸ್ತ್ರಿ ರಫೀಕ ಬಂದರು. ಪ್ರತಿದಿನ ತಮ್ಮ ಕ್ರಿಕೆಟ ಆಟದ ಬಗ್ಗೆ ಮಾತನಾಡುತ್ತಿದ್ದರು. ಇಂದು ನಿಮಗೆ ಮಾಲಕರ ಭೆಟ್ಟಿ ಮಾಡಿಸುತ್ತೇನೆ ಬರ್ರೀ ಸರ್ ಅಂತಾ ಮೈಸೂರ ರೆಸ್ಟೋರೆಂಟಗೆ ಕರೆದುಕೊಂಡು ಬಂದರು. ಅಲ್ಲಿ ನನ್ನ ರೂಢಿಯಂತೆ ಕುಟ್ಯಾಮಾಗೆ ಮಾತನಾಡಿದೆ. ಅಷ್ಟರಲ್ಲಿ ನಾಗೇಶ ಶೆಟ್ಟಿ ಮಾಲಕರು ಅಡುಗೆ ಮನೆಯಿಂದ ಕೌಂಟರ ಕಡೆಗೆ ಬಂದರು. ಆವಾಗ ರಫೀಕ ನಾಗೇಶ ಶೆಟ್ಟಿಯವರಿಗೆ ಪರಿಚಯಿಸುತ್ತಾ "ಇವರು ಈ ಹೊಟೇಲ ಮಾಲಕರು ಅಂತಾ ಹೇಳಿದರು. ಅಷ್ಟರಲ್ಲಿ ಇವರು ನಮ್ಮ ಹೊಟೇಲಿಗೆ ಬರುತ್ತಾರೆ" ಅಂದರು. ಮೂರು ಜನಾ ಸೇರಿ ಚಹಾ ಕುಡಿದೆವು. ಅವರೊಂದಿಗೆ ಗೆಳೆತನ ಆರಂಭ ವಾಯಿತು ಸುಮಾರು ೨೫ ವರ್ಷಗಳಿಂದ ನಾಗೇಶ ಮಾಲಕರ ಸ್ನೇಹ ಆತ್ಮೀಯತೆ ಹಾಗೂ ಬಂಧುತ್ವ ನನ್ನ ಜೊತೆ ಬೆಳೆದು ಕೊಂಡ ಬಂದಿದೆ. ಒಬ್ಬ ಗುರು, ಒಬ್ಬ ಒಳ್ಳೆಯ ಸ್ನೇಹಿತ ಸಿಗುವುದು ಪೂರ್ವ ಜನ್ಮದ ಪುಣ್ಯ ಎಂಬುದು ಲೋಕರೂಢಿ ಇದೆ. ಅವರ ಸ್ನೇಹ ನನಗೆ ದೊರತದ್ದೇ ಒಂದು ಪುಣ್ಯ ಅಂತಾನೇ ಭಾವಿಸಿದ್ದೇನೆ. ನನ್ನ ಪರಿವಾರಕ್ಕೆ ನಮ್ಮ ಸ್ನೇಹ ಬಳಗಕ್ಕೆ ಅವರು ನಿಜವಾಗಿಯೂ ಮಾಲಕರು.

ಮಾಲಕ ಎಂಬ ಪದದ ಅರ್ಥ ಒಡೆಯ. ಒಬ್ಬ ಒಡೆಯನಲ್ಲಿ ನಿಜವಾಗಿಯೂ ಯಾವ ಗುಣಗಳು ಇರಬೇಕೋ ಆ ಎಲ್ಲಾ ಗುಣಗಳನ್ನೂ ಭಗವಂತ ಅವರಿಗೆ ಕೊಟ್ಟಿದ್ದಾನೆ. ನನ್ನನ್ನಂತೂ ಅವರು ತಮ್ಮ ಪರಿವಾರದ ಸದಸ್ಯರಂತೆ ನೋಡಿದ್ದಾರೆ. ನಮ್ಮ ಯಾವದೇ ಮಾತು ಅವರು ಮೀರಿಲ್ಲ. ನೂರಾರು ಪುಸ್ತಕ ಓದಿದ, ಹತ್ತಾರು ಪುಸ್ತಕ ಬರೆದ ಸಾಹಿತಿಗಿಂತಲೂ ದೂರ ದೃಷ್ಟಿ, ವಿಚಾರ ಸಂಸ್ಕೃತಿ-ಸಂಸ್ಕಾರಗಳನ್ನು ಅವರಲ್ಲಿ ನಾನು ಕಂಡಿದ್ದೇನೆ. ನಾಗೇಶ ಮಾಲಕರ ಪರಿಚಿತ ವ್ಯಕ್ತಿ ಈ ಲೇಖನ ಓದಿದರೆ ಒಂಟೆಯ ಬಾಯಿಯಲ್ಲಿ ಜೀರಿಗೆ ಎಂಬಂತೆ ಅನಿಸುತ್ತದೆ.

ವ್ಯವಹಾರದಲ್ಲಿ ಪ್ರಾಮಾಣಿಕತೆ, ನಿಷ್ಠೆ ಇವರ ತತ್ವಗಳು. ಯಾವುದೆ ತತ್ವ ಸಿದ್ಧಾಂತದಿಂದ ಪಲಾಯನವಾಗುವುದಿಲ್ಲ. ಪ್ರತಿ ದಿನ ನೂರಾರು ಜನರ ಸಂಪರ್ಕದಲ್ಲಿ ಇರುವ ನಾಗೇಶ ಮಾಲಕರು. ಹಸನ್ಮುಖಿಗಳು. ಸಿಟ್ಟು, ಈರ್ಷೆ, ಅನ್ಯಾಯ ಇವೆಲ್ಲವೂ ಇವರಿಂದ ಅತಿ ದೂರ. ಸೌಮ್ಯ ಮಾತು ಅವಾಗವಾಗ್ಗೆ ಹಾಸ್ಯ ಇವರ ವಿಶೇಷತೆ ಎಂ.ಆರ್. ದ ಒಂದು ದೊಡ್ಡ ಪರಂಪರೆಯು ತಳಪಾಯ ಅತಿ ಬಲಿಷ್ಠ ಹಾಗೂ ಸದೃಡವಾಗಿದೆ. ಈ ಪರಪಂರೆ ಮೂರು ತಲೆಮಾರಿನ ವರೆಗೆ ಮುಂದುವರೆದಿದ್ದು ನಮ್ಮೆಲ್ಲರ ಅದೃಷ್ಟ. ಅವರಿಂದ ನಾನು ಸಾಕಷ್ಟು ಕಲಿತಿದ್ದೇನೆ. 'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಗಾದೆಯಂತೆ ಅವರ ವ್ಯಕ್ತಿತ್ವ, ಅವರ ವ್ಯಕ್ತಿತ್ವಕ್ಕೆ ನಮ್ಮ ಬಳಗದಿಂದ ಒಂದು ಸಲಾಂ.

ವಿಜಾಪುರ ಐತಿಹಾಸಿಕ ಪ್ರಸಿದ್ಧಿಯಂತೆ. ಇಲ್ಲಿ ಮಕ್ಕಳ ಸಾಹಿತ್ಯವು ಪ್ರಸಿದ್ಧಿ ಪಡೆದಿದೆ. ಮಕ್ಕಳ ಸಾಹಿತ್ಯದ ಹಿರಿಯ ವಿದ್ವಾಂಸ ಕವಿಗಳಾದ ಶ್ರೀ ಶಂ.ಗು.ಬಿರಾದಾರ, ಶ್ರೀ ಈಶ್ವರಚಂದ್ರ ಚಿಂತಾಮಣಿ, ಶ್ರೀ ಕಂಚಾಣಿ ಶರಣಪ್ಪಾ, ಶ್ರೀ ಶಿ.ಸು. ಸಂಗಮೇಶ. ಶ್ರೀ ಹ.ಮ. ಪೂಜಾರಿ ಇವರೆಲ್ಲರ ಸ್ನೇಹ ನಾಗೇಶ ಮಾಲಕರ ತಂದೆಯವರಾದ ಶ್ರೀ ಬಾಬುರಾವ್ ಅವರ ಜೊತೆ ಇತ್ತು. ಕೆಲವು ದಿನಗಳಿಂದ ಸಾಹಿತ್ಯ ಬಳಗ ಕೂಡುವ ಸ್ಥಳವೇ ಎಮ್.ಆರ್ ಆಗಿತ್ತು. ಅದೇ ಪರಂಪರೆಯಲ್ಲಿ "ಸೃಜನ" ಕನ್ನಡ-ಹಿಂದಿ ತ್ರೈಮಾಸಿಕ ಪತ್ರಿಕೆಯ ಮೂಲ ಸ್ಥಾನವು ಎಮ್.ಆರ್. ಆಗಿದೆ. ಅದೊಂದು ದಾಖಲೆ. ಅದಲ್ಲದೆ ಸಾಹಿತಿಗಳಿಗೆ ಗೌರವ ಸಿಗುವ ಪ್ರಮುಖ ಕೇಂದ್ರವೂ ಆಗಿದೆ.

ಸರ್ಕಾರದ ಯಾವ ಕೆಲಸವಿದ್ದರೂ ಅವರು ನನಗೆ ಹೇಳುತ್ತಾರೆ. ಆ ಕೆಲಸ ನನ್ನ ವೈಯಕ್ತಿಕ ಕೆಲಸಕ್ಕಿಂತಲೂ ಹೆಚ್ಚಿನ ಆದ್ಯತೆ ಕೊಟ್ಟು ಮಾಡುವ ಇಚ್ಛೆ ನನ್ನಲ್ಲಿದೆ. ಇದಕ್ಕೆ ನಾಗೇಶ ಮಾಲಕರ ಸ್ವಭಾವವೇ ಕಾರಣ. ಪ್ಲಾಟ ಖರೀದಿ, ಹೊಲ ಖರೀದಿ, ಯಾವದೇ ಆಸ್ತಿಯ ಬಗ್ಗೆ ಅವರ ಕುಟುಂಬದವರಿಗೆ ಹೇಳಿದಂತೆ ನನಗೂ ತಿಳಿಸಿ ಖರೀದಿಸಿದ್ದು ಅದು ಅವರ ದೊಡ್ಡ ಗುಣ. ಹೋಟೆಲಿನಲ್ಲಿ ಯಾವದೇ ಹೊಸ ಬಗೆಯ ಪದಾರ್ಥ ಮಾಡಿದರೆ, ಅಥವಾ ಯಾವುದಾದರೂ ವಿಶೇಷ ಪದಾರ್ಥವಿದ್ದರೂ ನನಗೆ ಹಾಗೂ ನಮ್ಮ ಬಳಗಕ್ಕೆ ತಿನಿಸಿ ಅದರ ರುಚಿ ಬಗ್ಗೆ ಕೇಳಿಕೊಳ್ಳುವ ಅವರ ಈ ಮಾತೃವಾತ್ಸಲ್ಯಕ್ಕೆ ತಲೆಬಾಗಲೇಬೇಕು. ತಾರತಮ್ಯ ಎಂಬ ಪದವೇ ಅವರಿಗೆ ಗೊತ್ತಿಲ್ಲ.

ಮೈಸೂರ ರೆಸ್ಟೋರೆಂಟ ನಾಮಕರಣದಲ್ಲಿ ಒಂದು ವಿಶೇಷವೇನೆಂದರೆ ಕರ್ನಾಟಕ ರಾಜ್ಯಕ್ಕೆ ಮೊದಲು ಮೈಸೂರ ರಾಜ್ಯವೆಂದಿತ್ತು. ಶ್ರೀ ಬಾಬುರಾವ್ ಮಾಲಕರು ಹೋಟೆಲ ಆರಂಭಿಸುವ ಸಮಯಕ್ಕೆ ಮೈಸೂರ ರಾಜ್ಯ ಎಂಬುದು ಗಮನದಲ್ಲಿ ಇಟ್ಟು ಕನ್ನಡ ನಾಡಿನ ಅಭಿಮಾನದ ಸಂಕೇತವಾಗಿ ನಾಮಕರಣ ಮಾಡಿ, ಮೈಸೂರ ನಗರದಷ್ಟು ಅಂದ ಚಂದ ಸಂಸ್ಕೃತಿಯನ್ನು ಬೆಳಗಿಸಿದ್ದಾರೆ. ಅದು ಇಂದಿಗೂ ಮುಂದುವರೆದಿದೆ. ಮೈಸೂರ ನಗರವು ಸಾಹಿತ್ಯ, ವಿಚಾರ ಸಂಕಿರಣ, ನಾಟಕೋತ್ಸವ ಅನೇಕ ಸಾಂಸ್ಕೃತಿಕ ಉತ್ಸವಗಳಿಗೆ ಹೆಸರಾಗಿದ್ದು, ಆ ನೆಲೆಯಲ್ಲಿ ತಮ್ಮ ಇತಿಮಿತಿಗಳಲ್ಲಿ ಸಾಹಿತ್ಯಕ್ಕೊಂದು ನೆಲೆ ಕಲ್ಪಿಸಿ ಕೊಟ್ಟಿದ್ದಾರೆ. ಇವರ ಈ ಸಾಹಿತ್ಯದ ಸೇವೆ ನಿರಂತರ ೪೦-೪೫ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಇವರ ಸಾಹಿತ್ಯ ಆಸಕ್ತಿಯ ಫಲವಾಗಿಯೇ ಈ ಅಭಿನಂದನ ಗ್ರಂಥ ಸ್ನೇಹಿತರ ಒತ್ತಾಸೆಯಿಂದ ರೂಪ ಪಡೆದಿರುವುದು.

ಮೈಸೂರ ರೆಸ್ಟೋರೆಂಟ ೧೯೬೭ ರಿಂದ ೧೯೮೮ ರವರೆಗೆ ಹೋಟೆಲ ಆರಂಭಿಸಿದ ಶ್ರೀ ಬಾಬುರಾವ್ ಶೆಟ್ಟಿ ಅವರ ಮಾಲಿಕತ್ವದಲ್ಲಿ, ೧೯೮೫ ರಿಂದ ಅವರ ಹಿರಿಯ ಚಿರಂಜೀವಿ ಶ್ರೀ ನಾಗೇಶ ಶೆಟ್ಟಿ ಇವರ ಹಿರಿತನಕ್ಕೆ ಬಂದಾಗ ಸಹೋದರರಾದ ಶ್ರೀ ಚಂದ್ರಕಾಂತ, ಶ್ರೀ ಶರತಕುಮಾರ ಹಾಗೂ ಶ್ರೀ ಶ್ರೀಕಾಂತ ಶೆಟ್ಟಿ ಎಲ್ಲರೂ ಕೂಡಿ ತಂದೆಯವರು ಕಟ್ಟಿದ ಗುಡಿಗೆ ಮಕ್ಕಳು ಕಳಸವಿಟ್ಟಂತೆ

ಹೋಟೆಲನ್ನು ಹೆಚ್ಚು ಭದ್ರಗೊಳಿಸಿದ್ದು ವಿಜಾಪುರ ನಗರದ ಜನರಿಗೆ ತಿಳಿದ ವಿಷಯ. ಕುಟುಂಬ ದೊಡ್ಡದಾದಂತೆ ಬೇರೆ ಬೇರೆ ವ್ಯವಹಾರದ ಬಗ್ಗೆ ಗಮನ ಹರಿಸಿ ಎರಡನೇ ಸಹೋದರರಾದ ಶ್ರೀ ಚಂದ್ರಕಾಂತ ಅವರು ಲಲಿತ ಮಹಲ ಹೋಟೆಲ ಮೇಲ್ವಿಚಾರಣೆಯೊಂದಿಗೆ ವಿಜಾಪುರ ನಗಾರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಕೆ.ಪಿ.ಸಿ.ಸಿ ಸದಸ್ಯರಾಗಿ ಸಾಮಾಜಿಕ ಸೇವೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಮೂರನೆಯವರಾದ ಶ್ರೀ ಶರತಕುಮಾರ ಅವರು ಲ್ಯಾಂಡ ಡವಲ್ಪಮೆಂಟ ಕೆಲಸದಲ್ಲಿ ತೊಡಗಿ ಕೃಷ್ಣಾ ಕಾಪ್ಲೆಂಕ್ಸ, ಸಿಟಿ ಸೆಂಟರ ದಂತಹ ಎರಡು ದೊಡ್ಡ ಸಂಕೀರ್ಣಗಳನ್ನು ನಿರ್ಮಿಸಿದ್ದಾರೆ. ಈಗ ಅಲ್ಲಿ ವ್ಯವಹಾರಗಳು ಆರಂಭಗೊಂಡಿವೆ. ಸದ್ಯ ಪಾಟೀಲ ಪ್ಲಾನೇಟ ಎಂಬ ಬಹುಮಹಡಿ ಕಟ್ಟಡದ ಕಾರ್ಯನಡೆದಿದೆ. ಅವರ ಕನಸಿನ ನಗರವೆಂದರೆ ವಿಜಾಪುರ ಗಚ್ಚಿನಕಟ್ಟಿ ಕಾಲೊನಿಯ ಮುಂದಿರುವ ಲಲಿತ ಇಂದ್ರ ಲೇಔಟ. ಅಲ್ಲಿ ಸುಂದರವಾದ ಮನೆಗಳನ್ನು ನಿರ್ಮಾಣ ಮಾಡಿದ್ದಾರೆ. ಇವೆಲ್ಲವುಗಳು ಅವರ ಶ್ರಮದ ಸಂಕೇತವಾಗಿದೆ.

ನಾಲ್ಕನೆಯವರಾದ ಶ್ರೀ ಶ್ರೀಕಾಂತ ಶೆಟ್ಟಿಯವರು ಹೊಸ ವಿಠ್ಠಲ ಮಂದಿರದ ಹತ್ತಿರವಿರುವ ತಮ್ಮ ಹಳೆ ಮನೆ ಕಟ್ಟಡವನ್ನು ನವೀಕರಿಸಿ ಅಲ್ಲಿ ತಮ್ಮ ತಂದೆಯವರ ಹೆಸರಿನಲ್ಲಿ ಕೆ. ಬಿ. ರೆಸಿಡೆನ್ಸ್ ಎಂದು ನಾಮಕರಣ ಮಾಡಿ ಲಾಡ್ಜಿಂಗ್ ಮತ್ತು ಹೋಟೆಲ್ ಉದ್ಯೋಗವನ್ನು ನೋಡಿಕೊಳ್ಳುತ್ತಿದ್ದಾರೆ. ಕಳೆದ ಒಂದು ವರ್ಷದಿಂದ ಮೂರನೆಯ ತಲೆಮಾರಿನವರಾದ ಸಂದೇಶ ನಾಗೇಶ ಶೆಟ್ಟಿ ಅವರು ಎಮ್. ಆರ್ ಹೋಟೆಲಿನಲ್ಲಿ ತಮ್ಮ ತಂದೆಯವರಿಗೆ ಸಹಾಯ ಮಾಡುತ್ತಾ ತಮ್ಮ ಮನೆತನದ ಉದ್ಯಮ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬೆಳೆಯುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ರಾಮಾಯಣದ ಸಹೋದರತ್ವದ ನಾಲ್ಕು ಪಾತ್ರಗಳಾದ ರಾಮ, ಲಕ್ಷ್ಮಣ, ಭರತ ಹಾಗೂ ಶತ್ರುಘ್ನ ರಂತೆ ಇದ್ದದ್ದು ಆ ನಾಲ್ಕು ಪಾತ್ರಗಳ ಪ್ರತಿಬಿಂಬವಾಗಿ ನಾಗೇಶ, ಚಂದ್ರಕಾಂತ, ಶರತಕುಮಾರ ಹಾಗೂ ಶ್ರೀಕಾಂತ ಸಹೋದರರು ಇದ್ದದ್ದು ಮಾತೋಶ್ರೀ ಲಲಿತಮ್ಮನವರು ಅತ್ಯಂತ ಸಂತೋಷದಿಂದ ಈ ನಾಲ್ಕು ಜನ ಮಕ್ಕಳ ಏಳಿಗೆಯನ್ನು ಕಣ್ತುಂಬ ನೋಡಿ ಈ ಇಳಿವಯಸ್ಸಿನಲ್ಲೂ ನೆಮ್ಮದಿಯಿಂದ ಮಕ್ಕಳ ಕಣ್ಣಾವಲಿನಲ್ಲಿ ಜೀವನ ಸಾಗಿಸುತ್ತಿರುವುದು ಅವರ ಪುಣ್ಯದ ಫಲವೆಂದು ಹೇಳಬಹುದು. ಇಂತಹ ಮಕ್ಕಳಿಗೆ ಜನ್ಮ ನೀಡಿದ ಆ ಮಹಾತಾಯಿ ನಿಜಕ್ಕೂ ಧನ್ಯಳು. ಇಂಥದೊಂದು ಸಂಸ್ಕೃತಿ ಕುಟುಂಬ ಸದಾ ನಮ್ಮ ಭಾರತೀಯ ಕುಟುಂಬ ವ್ಯವಸ್ಥೆಗೆ ಮಾದರಿಯಾಗಿದೆ. ಸಮಾಜಶಾಸ್ತ್ರ ಓದುವ ನಮ್ಮಂತವರಿಗೆ ಕುಂಟುಂಬ ವ್ಯವಸ್ಥೆಯ ಬಗ್ಗೆ ಮಾದರಿಯ ಪ್ರಯೋಗಾಲಯವಿದ್ದಂತೆ ಎಂದರೆ ಅತಿಶಯೋಕ್ತಿ ಎನಿಸದು.

■■

‘ಕಂಬೀರ ಕುಂಜ’ ಮಹಾಬಳೇಶ್ವರ ಕಾಲೋನಿ, ದರ್ಗಾ ರೋಡ,
ವಿಜಯಪುರ ಮೊ. ೯೪೪೮೧೮೫೨೦೫